Doc-502
7-P-2

Reg no KkvN 12 - For Influential Publicity - 6-10-76

೪೯ನೇ ಮಹೋತ್ಸವ ವರವೇಂಕ ವಜ್ರಮಹೋತ್ಸವ ನೇರವೇಂಕಲಿರುವ ಪತ್ರಿಕೆ

ಸತ್ಯವಾದಿ
SATYAVADI

60th Diamond Jubilee Year
೬೦ನೇ ವಜ್ರಮಹೋತ್ಸವ ವರ್ಷ
★ Satyavadi Daily . Mysore 4 ★

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ (5 ಪೈಸೆ

ಮಾಂಸದ ಮಾರಾಟ ನಿಷೇಧ

ಬುದ್ಧ ಜಯಂತಿ ಪ್ರಯುಕ್ತ ನಾಳೆ ಮೈಸೂರು ನಗರಪಾಲಿಕೆ ವ್ಯಾಪ್ತಿಗೊಳಪಟ್ಟ ಪ್ರದೇಶದಲ್ಲಿರುವ ಎಲ್ಲ ಕಸಾಯಿಖಾನೆಗಳು ಹಾಗೂ ಮಾಂಸದ ಮಾರಾಟ ಅಂಗಡಿಗಳನ್ನು ಮುಚ್ಚುವಂತೆ ಆಜ್ಞೆ ಹೊರಡಿಸಲಾಗಿದ್ದು, ಅಂದು ಮಾಂಸದ ಮಾರಾಟವನ್ನು ನಿಷೇಧಿಸಲಾಗಿದೆ.

○

ಶ್ರೀ ಪಕ್ಕನಾರಾಯಣ ಪೂಜಾ

ಮೈಸೂರು ವೀಣೆ ಶಾಮಣ್ಣನವರ ಬೀದಿ 401/1 ಮನೆಯಲ್ಲಿ ನೆಲಸಿರುವ ಶ್ರೀ ಹೆಚ್ ಆರ್ ಸುಬ್ರಹ್ಮಣ್ಯ ಜೋಯಿಸ್‌ರವರು 8 ನೇ ತಾರೀಖು ಶುಕ್ರವಾರ ಬೆಳಿಗ್ಗೆ 8 ರಿಂದ ಮಧ್ಯಾಹ್ನ 12 ಗಂಟೆವರೆಗೆ ಶ್ರೀ ಪಕ್ಕನಾರಾಯಣನ ಪೂಜೆ ನೆರವೇರಿಸಿರುವರು ಭಕ್ತಾದಿಗಳು ಸಕಾಲದಲ್ಲಿ ಆಗಮಿಸಬೇಕಾಗಿ ತಿಳಿಸಿರುತ್ತೆ.

○

ವರದಕ್ಷಿಣೆ ಕುರಿತು ಪ್ರತಿಜ್ಞೆ

ಬಳ್ಳಾರಿ — ಹದಿನಾಲ್ಕು ಮಾರನಾಡಿಯುವಕರು ವರದಕ್ಷಿಣೆ ಕೊಡದಿರಲು ಮತ್ತು ಪಡೆಯದಿರಲು ಪ್ರತಿಜ್ಞೆಯನ್ನು ಮಾಡಿದರು.

●

ಪ್ರತಿಮೆಯ ಪತ್ತೆ

ಶಿವಾಜಿ ಮಹಾರಾಜರ ಗುರು ಶ್ರೀ ಸಮರ್ಥ ರಾಮದಾಸರ ಸುಂದರ ಮರದ ಕೆತ್ತನೆಯ ಪ್ರತಿಮೆಯನ್ನು ತೆಲುಗುನಾಡಿನ ಭೂಗರ್ಭ ಇಲಾಖೆ ಪತ್ತೆ ಮಾಡಿತು 75 ಸಿ ಎಂ ಎತ್ತರದ ಈ ಅಪೂರ್ವ ಪ್ರತಿಮೆಯು ಹದಿನೆಂಟನೆ ಶತಮಾನದ್ದೆಂದು ಹೇಳಲಾಗಿದೆ.

●

ದಿವ್ಯವಾಣಿ

ಜ್ಞಾನವಿಲ್ಲದ ನಾಯಕ ಕಣ್ಣಿಲ್ಲದ ಚಾಲಕನಂತೆ — ಚಿಂಗ್ ಚಾ.

ಪ್ರಶಸ್ತಿ ಅನುಗ್ರಹ

ಚಿಕ್ಕಮಗಳೂರು — ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳವರು ಉದಾರ ದಾನಿಗಳ ವಂಶದ ಮಾಜಿ ಶಾಸಕ ಶ್ರೀ ವಾಸುದೇವ ಮೂರ್ತಿಯವರಿಗೆ " ಗುರು ಭಕ್ತ ಚೂಡಾರತ್ನ " ಪ್ರಶಸ್ತಿ ಅನುಗ್ರಹಿಸಿರುವರು.

★

ದಕ್ಷಿಣದ ಅಕ್ಕಿ ವಲಯ

ಹೈದರಾಬಾದು — ಆಂಧ್ರ ಪ್ರದೇಶ ತಮಿಳುನಾಡು, ಕರ್ನಾಟಕ ಮತ್ತು ಪಾಂಡಿಚೇರಿಯಿಂದ ವಿಸ್ತರಿಸಲಿರುವ ದಕ್ಷಿಣ ಅಕ್ಕಿ ವಲಯವು ನವೆಂಬರ್ 1 ರಿಂದ ಜಾರಿಗೆ ಬರುವುದೆಂದು ಹೇಳಲಾಗಿದೆ.

★

ನಾಯಿಯ ಭಕ್ತಿ

ನ್ಯೂಯಾರ್ಕ್ — 2 ವರ್ಷಗಳ ಕೆಳಗೆ ಇಲ್ಲಿನ ವಿಮಾನ ನಿಲ್ದಾಣದಿಂದ ಪ್ರಯಾಣ ಮಾಡಿದ ಒಬ್ಬನ ನಾಯಿ ಎಂಬ ಅಲ್ಸೇಷಿಯನ್ ನಾಯಿ, ವಿಮಾನ ನಿಲ್ದಾಣದಲ್ಲೇ ಸುತ್ತಾಡುತ್ತಾ ಹೋಗಿ ಬರುವ ವಿಮಾನಗಳಲ್ಲಿ ತನ್ನ ಯಜಮಾನನನ್ನು ಹುಡುಕುತ್ತಿದೆ ವಿಮಾನ ನಿಲ್ದಾಣ ಕೆಲಸಗಾರರು ಇದಕ್ಕೆ ಆಹಾರ ಕೊಡುತ್ತಿದ್ದಾರೆ ಅದಕ್ಕೋಸ್ಕರ ಒಂದು ನಾಯಿ ಮನೆ ಕಟ್ಟಿರುವರು ಆದರೆ ಅದು ಅಲ್ಲಿರಲು ಸಮ್ಮತಿಸದು ಇದರ ಕತೆಯನ್ನು ಕಮ್ಯೂನಿಸ್ಟ್ ಯುವಕ ಸಂಸ್ಥೆಯ ಪತ್ರಿಕೆ ಪ್ರಕಟಿಸಿದ ನಂತರ ಇದಕ್ಕೆ ಸಹಾಯಗಳು ಬರುತ್ತಿವೆ.

★

ಓರ್ವನ ಬಂಧನ

ತಿರುಪತಿ — ಪಾಲಮಾಲ ಅರಣ್ಯ ಭಾಗದಲ್ಲಿ ತಲಾ ರೂ. 50 ಸಾವಿರ ಬೆಲೆ ಬಾಳುವ ಭೂದೇವಿ ಮತ್ತು ಶ್ರೀದೇವಿ ಪಂಚಲೋಹ ವಿಗ್ರಹಗಳು ದೊರೆತಿವೆ. ಈ ಸಂದರ್ಭದಲ್ಲಿ ಕಾಳಹಸ್ತಿಯಲ್ಲಿ ಓರ್ವನ ಬಂಧನವಾಗಿದೆ.

ಬ್ರಹ್ಮೋತ್ಸವ ವೀಕ್ಷಣೆ

ಶನಿವಾರ — ಶನಿವಾರ ಶ್ರೀ ನಂಜನಗೂಡು ಶ್ರೀಕಂಠೇಶ್ವರಸ್ವಾಮಿ ರಥೋತ್ಸವವನ್ನು ಅರ್ಧ ಲಕ್ಷ ಭಕ್ತರು ವೀಕ್ಷಿಸಿದರು.

○

ಕಾಮರಾಜರ ಸ್ಮಾರಕ ನಿರ್ಮಾಣ

ಮದರಾಸು — ಖ್ಯಾತ ನಾಯಕ ಶ್ರೀ ಕಾಮರಾಜರು ವಾಸಿಸುತ್ತಿದ್ದ ಹಾಗೂ ಮರಣಹೊಂದಿದ ತ್ಯಾಗರಾಜ ನಗರದ ಅವರ ಮನೆಯನ್ನು ಸ್ಮಾರಕವಾಗಿ ಕಾಪಾಡಲು ಸರ್ಕಾರ ಪಡೆಯಲಿದೆ.

★

ವಿಶ್ವ ದಾಖಲೆಯ ಹೆಸ್ಮೆ

ಬೆಲ್ಜಿಯಂನ ಕಾರ್ಬೆರ್ರಾನಿಂದ ಬಂದಿರುವ ವಾರ್ತೆ ಇದು . ಹನ್ನೊಂದು ದಿನಗಳ ಹಿಂದೆ ಒಂದು ಚಟುವಟಿಕೆ ಡಿಪಾರ್ಟ್‌ಮೆಂಟಿನ ಸ್ಟೋರ್ಸ್ ಸಭಾಂಗಣದಲ್ಲಿ 7 ಮಂದಿಯನ್ನು ಹಿಪ್ನಾಟೈಸ್ ಮಾಡಿ ನಿದ್ರೆಗೊಳಿಸಿ, ನಂತರ ಅವರನ್ನು ಎಚ್ಚರಗೊಳಿಸಿದ ಹಿಪ್ನಾಟಿಸ್ಟ್ ಯಿಯ್ವೆಸ್ಟ್ನ ಸಾಮೂಹಿಕ ಹಿಪ್ನಾಟಿಸಂಗೆ ವಿಶ್ವದಾಖಲೆ ಹೆಸರನ್ನು ಹಾಕಿದ್ದಾನೆ.

★

ನರ್ಸಿಂಗ್ ಹೋಂ ಕುರಿತು ಸುಗ್ರೀವಾಜ್ಞೆ

ಬೆಂಗಳೂರು — ಖಾಸಗಿ ನರ್ಸಿಂಗ್ ಹೋಂಗಳ ಮೇಲಿನ ಹತೋಟಿಯ ಸುಗ್ರೀವಾಜ್ಞೆ ಹೊರಡಿಸಲಾಗಿದೆ

★

ಶಾಸನ ಸಭೆ ಸಮಾವೇಶಕ್ಕೆ ಕರೆ

ಬೆಂಗಳೂರು — ಶಾಸನ ಸಭೆಯು ನವೆಂಬರ್ 8 ರಂದು ಸೇರುವಂತೆ ರಾಜ್ಯಪಾಲರು ಕರೆದಿರುವರು.

●

ಎಂಡು ಸಾಲಗಳನ್ನು ಪಡೆಯುವ ಪ್ರಕಟಣೆ

ನವದೆಹಲಿ — ಒಟ್ಟು 275 ಕೋಟಿ ರೂಪಾಯಿಗಳ 2 ಸಾಲಗಳನ್ನು ಪಡೆಯುವುದನ್ನು ಸರ್ಕಾರ ಪ್ರಕಟಿಸಿದೆ.

○

ಎಲೆಕ್ಟ್ರಾನಿಕ್ ಕಾರ್ಪೊರೇಷನ್ ಸ್ಥಾಪನೆ

ಬೆಂಗಳೂರು — ರಾಜ್ಯದ ಎಲೆಕ್ಟ್ರಾನಿಕ್ ಕೈಗಾರಿಕೆ ಅಭಿವೃದ್ಧಿಗಾಗಿ ಕರ್ನಾಟಕ ಎಲೆಕ್ಟ್ರಾನಿಕ್ ಸಂಸ್ಥೆ ಸ್ಥಾಪನೆಯಾಯಿತು.

★

ಪೋಲೀಸರಿಂದ ತನಿಖೆ ವ್ಯವಸ್ಥೆ

ಬೆಂಗಳೂರು — ರಾಜ್ಯ ಸಹಕಾರ ಬ್ಯಾಂಕಿನ ರೂ 3 ಲಕ್ಷ 12 ಸಾವಿರ ನಾಪತ್ತೆಯಾಗಿರುವ ಕುರಿತು ಪೋಲೀಸರ ತನಿಖೆ ನಡೆಯುತ್ತಿದೆ.

ಮೈಸೂರು ದಸರಾ ವಸ್ತುಪ್ರದರ್ಶನ

ನಾಳೆ ಸಂಜೆ 6 ರಿಂದ ಕುಮಾರಿ ಉಷಾರಿಂದ ವೀಣಾವಾದನ

7 ರಿಂದ ಕನಕಾಂಗಿ ಯಕ್ಷಗಾನ

ನಾಳಿದ್ದು ಸಂಜೆ 5-30 ರಿಂದ 6 ಗಂಟೆ ವರೆಗೆ ಕಂಸಾಳೆ

6 ರಿಂದ ಕುಮಾರಿ ಲಾವಣ್ಯರ ನೃತ್ಯ

7 ರಿಂದ ಸೀನಿಯರ್ ಅಣ್ಣ ತಂಗಿಯರಿಂದ ಚಿತ್ರಗೀತೆಗಳು

ಹೆಣ್ಣು ಹುಲಿ ಸತ್ತು ಬಿದ್ದಿದ್ದಿತು

ಮೈಸೂರು — ಕರ್ನಾಟಕ ಕೇರಳ ಗಡಿಯ ಮೂಲೆ ಹೊಳೆ ಹತ್ತಿರ ಹದಿನೆಂಟು ವಯಸ್ಸಿನ ಹೆಣ್ಣು ಹುಲಿ ಸತ್ತು ಬಿದ್ದಿದುದು ವರದಿಯಾಗಿದೆ.

ಭಾರತದಲ್ಲಿ ಗೋವಧೆ

ಪೂರ್ಣ ನಿಷೇಧವಾಗಲಿ

ವುಡ್‌ಲಾಂಡ್ಸ್ 8 10 76 ರಿಂದ

ಅವೋಘ ಆರಂಭ

ಪ್ರೇಮದ ಕಾಣಿಕೆ

ಕನ್ನಡ ಕಲರ್

ಡಾ. ರಾಜಕುಮಾರ್ ಅರತಿ ಜಯಮಾಲ ಅಭಿನಯ

ದಿನ 3 ಪ್ರದರ್ಶನಗಳು

ಅಪೂರ್ವ 8 10 76 ರಿಂದ

ಉನರ್ಚಿಗಳ್ A

ಕಮಲಾ ಹಾಸನ್ ಅಭಿನಯ

ತಮಿಳು ಪ್ರತಿ ದಿನ 3 ಪ್ರದರ್ಶನಗಳು

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram, Mysore 4

ಗೋರಕ್ಷಣ'ಕ್ಕೆ ಸಕಲ ನೆರವು ನೀಡಿ

ಗೋರಕ್ಷಣೆ ಪ್ರಾಣಿದಯ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, " ಗೋರಕ್ಷಣ " ವು ತನ್ನ ಬೆಳ್ಳಿ ಹಬ್ಬ ನೆರವೇರಿಸುವುದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, ' ಗೋರಕ್ಷಣ " ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ

' ಗೋರಕ್ಷಣ' ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು 4

" ಸತ್ಯವಾದಿ " ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ " ಸತ್ಯವಾದಿ " ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇನೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ. ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

SHAKTI

SUDHA

A Superb Tonic

Contribute Liberally to

the National Defence Fund

Protect the Cow